# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

---

**ದಿನಾಂಕ: 28.12.2022 ರಂದು ಸಂಜೆ 4:30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 23ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ನಡಾವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಮಹೇಶ ವಿ**<br>ಡೀನ್ (ಶೈಕ್ಷಣಿಕ) (ಕಾ/ಭಾ)<br>ಕರಾಮುವಿ, ಮೈಸೂರು | **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು |
| **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಮಹೇಶ ವಿ.**<br>**ವಿಶೇಷಾಧಿಕಾರಿ –** ಡೀನ್ (ಶೈಕ್ಷಣಿಕ)<br>ಕರಾಮುವಿ, ಮೈಸೂರು. |
| **ವಿವಿಧ ನಿಕಾಯಗಳ (ಸ್ಕೂಲ್) ಪ್ರಭಾರ ನಿರ್ದೇಶಕರು** | |
| **ಪ್ರೊ. ರಾಮನಾಥಮ್ ನಾಯ್ಡು ಎಂ.** | ಭಾಷಾ ನಿಕಾಯ |
| **ಡಾ. ಆರ್.ಹೆಚ್. ಪವಿತ್ರ** | ಸಮಾಜ ವಿಜ್ಞಾನ ನಿಕಾಯ |
| **ಡಾ. ಲಕ್ಷ್ಮೀ .ಎನ್** | ಶಿಕ್ಷಣ ನಿಕಾಯ |
| **ಡಾ. ಮಹೇಶ ವಿ.** | ವಾಣಿಜ್ಯ ನಿಕಾಯ |
| **ಡಾ. ಹೆಚ್. ರಾಜೇಶ್ವರಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ನಿರಂಜನ್ ರಾಜ್ ಎಸ್.** | ವಿಜ್ಞಾನ ನಿಕಾಯ |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಸಚಿವರು ಅಧ್ಯಕ್ಷರ ಸೂಚನೆಯಂತೆ 23ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

ಕುಲಸಚಿವರು　　　　　　　　　　　　ಕುಲಪತಿಗಳು

**ವಿಷಯ ಸಂಖ್ಯೆ: 23.01**

ವಿಷಯ: NAAC Portal ನಲ್ಲಿ Upload ಮಾಡುವ ಸಂಬಂಧ Self Study Report ಅನ್ನು ಅನುಮೋದಿಸುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ NAAC ಘಟಕವನ್ನು ಸ್ಥಾಪಿಸಲಾಗಿರುತ್ತದೆ. ದಿನಾಂಕ 24 ನೇ ಜೂನ್ 2022 ರಂದು Institutional Information for Quality Assessment (IIQA) ಅನ್ನು ಸಲ್ಲಿಸಿದ್ದು, ನ್ಯಾಕ್ IIQA ಗೆ ಅನುಮೋದನೆಯನ್ನು ನೀಡಿರುತ್ತದೆ. ಮುಂದುವರೆದು, ಪ್ರಸ್ತುತ NAAC ಮಾನ್ಯತೆಗಾಗಿ, ಸಿದ್ದಪಡಿಸಲಾಗಿರುವ Self Study Report ಅನ್ನು NAAC Portal ನಲ್ಲಿ Upload ಮಾಡುವ ಸಂಬಂಧ Self Study Report ಕರಡನ್ನು ದಿನಾಂಕ 28/12/2022 ರಂದು ನಡೆಯಲಿರುವ ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ಲಗತ್ತುಗಳು:**

1. Self Study Report ಕರಡು ಪ್ರತಿ
2. ಈವರೆಗೂ NAAC ಘಟಕದಿಂದ ಕೈಗೊಳ್ಳಲಾಗಿರುವ ಕ್ರಮಗಳ ಕುರಿತಾದ ವರದಿ

**ತೀರ್ಮಾನ : NAAC Portal ನಲ್ಲಿ Upload ಮಾಡುವ ಸಂಬಂಧ Self Study Report ಅನ್ನು ಅನುಮೋದಿಸಲಾಯಿತು.**

*********

**ವಿಷಯ ಸಂಖ್ಯೆ: 23.02**

**ವಿಷಯ : ಕ.ರಾ.ಮು.ವಿ ಯ 2023ನೇ ಜನವರಿ ಆವೃತ್ತಿಯ ಪ್ರವೇಶಾತಿಯನ್ನು ಹೆಚ್ಚಳ ಮಾಡುವ ದೃಷ್ಟಿಯಿಂದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಜಾಹೀರಾತನ್ನು ನೀಡುವುದು, ಬಿ.ಎಸ್ಸಿ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಬಗೆಗೆ.**

*****

1. 2020ರ ಜುಲೈ ಆವೃತ್ತಿಯಿಂದ ಯು.ಜಿ.ಸಿ ಯು ಕ.ರಾ.ಮು.ವಿ ಗೆ ಬಿ.ಎಸ್ಸಿ ಯ ವಿವಿಧ ವಿಷಯಗಳಿಗೆ ಪ್ರವೇಶಾತಿಯನ್ನು ನಡೆಸಲು ಅವಕಾಶವನ್ನು ನೀಡಿರುವುದರಿಂದ 2023ನೇ ಜನವರಿ ಆವೃತ್ತಿಯಲ್ಲಿ ಬಿ.ಎಸ್ಸಿ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳ ಮಾಡುವ ದೃಷ್ಠಿಯಿಂದ ವಿಜ್ಞಾನ ವಿಷಯಗಳನ್ನು ಒಳಗೊಂಡ, ವಿಜ್ಞಾನ ವಿಷಯಗಳ ವಾರಾಂತ್ಯ ಸಮಾಲೋಚನೆ ಸಂಪರ್ಕ ಕಾರ್ಯಕ್ರಮ, ಪ್ರಾಯೋಗಿಕ ತರಗತಿಗಳನ್ನು ನಡೆಸಲು ಅನುಕೂಲ ಇರುವ ಕಾಲೇಜುಗಳಲ್ಲಿ ಕ.ರಾ.ಮು.ವಿ ಯ ಬಿ.ಎಸ್ಸಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಮತ್ತು ಕ.ರಾ.ಮು.ವಿ ಯ ಬಿ.ಎಸ್ಸಿ ಕಲಿಕಾರ್ಥಿ ಸಹಾಯ ಕೇಂದ್ರಗಳಾಗ ಬಯಸುವ ಕಾಲೇಜುಗಳಿಗೆ ಶುಲ್ಕವನ್ನು ನಿಗಧಿಪಡಿಸುವ ಮತ್ತು ಜಾಹೀರಾತನ್ನು ನೀಡಲು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲು ಕೋರಲಾಗಿದೆ.
2. ಕರ್ನಾಟಕ ರಾಜ್ಯದಾದ್ಯಂತ ಇರುವ ಸರ್ಕಾರಿ ಕಾಲೇಜುಗಳಲ್ಲಿ ಕ.ರಾ.ಮು.ವಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ವಿ.ವಿ ನಿಲಯವು ನಿಗಧಿಗೊಳಿಸಿರುವ ಶುಲ್ಕವನ್ನು ಪಡೆಯಬೇಕೆ ಅಥವಾ ಬೇಡವೆ ಎಂಬ ವಿಷಯದ ಕುರಿತು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲು ಕೋರಲಾಗಿದೆ.

ಕುಲಸಚಿವರು ಕುಲಪತಿಗಳು

3. ಕ.ರಾ.ಮು.ವಿ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಗೆ ಬರುವ ಕಲಿಕಾರ್ಥಿ ಸಹಾಯ ಕೇಂದ್ರಗಳು ಆಯಾ ಪ್ರಾದೇಶಿಕ ಕೇಂದ್ರಗಳಿಗೆ ತಾವು ನಡೆಸಿರುವ ಪ್ರವೇಶಾತಿ ಪೂರ್ವ ಸಮಾಲೋಚನೆಯ ವಿವರಗಳನ್ನು ಸಲ್ಲಿಸುವುದು ಎಂಬುವ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ತೀರ್ಮಾನಿಸಲು ಕೋರಲಾಗಿದೆ.
4. ಕ.ರಾ.ಮು.ವಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಸ್ಥಾಪಿಸಿದ್ದು ಇಂತಹ ಕಾಲೇಜುಗಳಿಗೆ ಪ್ರವೇಶಾತಿ ಪೂರ್ವ ಪ್ರೋತ್ಸಾಹಧನವನ್ನು ಸಂಯೋಜನಾಧಿಕಾರಿಗಳಿಗೆ ನೀಡಬೇಕೆ ಅಥವಾ ಕಾಲೇಜಿಗೆ ನೀಡಬೇಕೆ ಎಂಬುವ ಕುರಿತು ತೀರ್ಮಾನಿಸಲು ವಿಷಯವನ್ನು ಶೈಕ್ಷಣಿಕ ಮಂಡಳಿಗೆ ಮಂಡಿಸಲಾಗಿದೆ. **ಉದಾ:** ಮಂಗಳೂರಿನ ಕ.ರಾ.ಮು.ವಿಯ ಕಲಿಕಾರ್ಥಿ ಸಹಾಯ ಕೇಂದ್ರವಾದ ದಯಾನಂದ ಪೈ ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಗೌರವ ಸಂಭಾವನೆ ನೀಡುವಂತೆ ಕೋರಿರುತ್ತಾರೆ.
5. 2023ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲು ವಿ.ವಿ ನಿಲಯವು ನಿಗದಿಪಡಿಸಿರುವ ಶುಲ್ಕವನ್ನು ಹೆಚ್ಚು ಮಾಡುವ ಕುರಿತು.

- (Application processing fee is Rs 5000/-(Non Refundable)
- Colleges, which will be recognized as Learner Support Centre, shall have to pay for MBA.

  **Rs 20,000**/-
  For all PG Courses, **Rs 10,000/**-.
  For all UG Courses **Rs 5,000**/.

ಮೇಲಿನ ವಿಷಯಗಳನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲು ವಿಷಯಗಳನ್ನು ಮಂಡಿಸಲಾಗಿದೆ.

**ಚರ್ಚೆ**

ಮಾನ್ಯ ಕುಲಸಚಿವರು ಮಾತನಾಡಿ ಪ್ರಸ್ತುತ ನಿಗಧಿಪಡಿಸಿರುವ ಶುಲ್ಕವು ಬಹಳ ಕಡಿಮೆ ಇದ್ದು, ಶುಲ್ಕವನ್ನು ಪರಿಷ್ಕರಿಸುವುದು ಅವಶ್ಯವಿದೆ ಹಾಗೇ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಪ್ರವೇಶಾತಿ ಸಂಬಂಧವಾಗಿ target ನಿಗಧಿಪಡಿಸುವುದು ಸೂಕ್ತ ಈ ರೀತಿ ದರವನ್ನು ಪರಿಷ್ಕರಿಸಿ target ನಿಗಧಿಪಡಿಸಿ ಕಲಿಕಾರ್ಥಿ ಸಹಾಯಕ ಕೇಂದ್ರಗಳಿಗೆ ಅನುಮತಿ ನೀಡಿದಲ್ಲಿ ಗುಣಮಟ್ಟವಿರುವ ಸಹಾಯ ಕೇಂದ್ರಗಳನ್ನು ತೆರೆದಂತಾಗುತ್ತದೆ ಹಾಗೇ ಪ್ರವೇಶಾತಿ ಸಂಖ್ಯೆಯು ಸಹ ಹೆಚ್ಚಾಗುವ ಸಾಧ್ಯತೆ ಇರುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸರ್ಕಾರಿ ಕಾಲೇಜುಗಳಲ್ಲಿ ತೆರೆಯುವ ಸಂಬಂಧ ಕ್ರಮವಹಿಸಬೇಕು ಎಂದು ತಿಳಿಸಿದರು ಈ ಬಗ್ಗೆ ಮಾತನಾಡಿದ ಡಾ. ಮಹೇಶ ರವರು ಓ.ಡಿ.ಎಲ್. ನಿಯಮಾವಳಿ ಪ್ರಕಾರ ಸರ್ಕಾರಿ ಕಾಲೇಜುಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತರೆಯುವ ಬಗ್ಗೆ approach ಮಾಡಬೇಕು ನಂತರದಲ್ಲಿ ಖಾಸಗಿ ಕಾಲೇಜುಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತರೆಯಲು ಅವಕಾಶ ನೀಡ ಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಲಸಚಿವರು          ಕುಲಪತಿಗಳು

ನಿರಂಜನ್ ರಾಜ್, ರವರು ಮಾತನಾಡಿ ಸರ್ಕಾರಿ ಕಾಲೇಜುಗಳು ನ್ಯಾಕ್ ಮಾನ್ಯತೆಗೆ ಪ್ರಯತ್ನಿಸುತ್ತಿರುವುದರಿಂದ ಕರಾಮವಿ ನಿಲಯದ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತೆರೆದಲ್ಲಿ ಅಂತಹ ಕಾಲೇಜುಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಕಲಿಕಾರ್ಥಿ ಕೇಂದ್ರ ತೆರೆಯಲು ಮುಂದೆ ಬರುವುದಾಗಿ ತಿಳಿಸಿದರು. ಮುಂದುವರೆದು, ಡಾ. ಪವಿತ್ರ ರವರು ಮಾತನಾಡಿ ಸರ್ಕಾರಿ ಕಾಲೇಜುಗಳ ಜೊತೆಗೆ ವಿವಿ ನಿಲಯದ ಸಮೀಪದಲ್ಲಿರುವ ಖಾಸಗಿ ಕಾಲೇಜುಗಳಲ್ಲಿಯು ಕಲಿಕಾರ್ಥಿ ಕೇಂದ್ರವನ್ನು ತೆರೆದಲ್ಲಿ ಅನುಕೂಲವಾಗುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ರಾಮನಾಥಂ ನಾಯ್ಡು ರವರು ಮಾತನಾಡಿ ಪ್ರಸ್ತುತ ಮೈಸೂರಿನ ಟಿ.ಟಿ.ಎಲ್ ಕಾಲೇಜಿನ ಕಲಿಕಾರ್ಥಿ ಕೇಂದ್ರದ ಸಿಬ್ಬಂದಿಗಳಿಗೆ ಗೌರವಧನ ನೀಡುತ್ತಿದ್ದು ಅದರಂತೆ ಎಲ್ಲಾ ಕಲಿಕಾರ್ಥಿ ಕೇಂದ್ರಗಳಿಗೆ ನೀಡುವುದೆ ಅಥವಾ ವೇತನ ನೀಡುವುದೆ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಿರುವುದಾಗಿ ತಿಳಿಸಿದರು.

ಡಾ. ರಾಜೇಶ್ವರಿ ರವರು ಮಾತನಾಡಿ ನ್ಯಾಕ್ ಮಾನ್ಯತೆ ಸಂಬಂಧವಾಗಿ ಕಲಿಕಾರ್ಥಿ ಸಹಾಯ ಕೇಂದ್ರಗಳು ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸಿರುವ ಬಗ್ಗೆ ವರದಿಯನ್ನು ನೀಡಬೇಕಿರುವ ಹಿನ್ನೆಲೆಯಲ್ಲಿ ಮುಂದಿನ ಸಾಲುಗಳ ಪ್ರವೇಶಾತಿ ಸಂದರ್ಭದಲ್ಲಿ ಈ ಸಂಬಂಧವಾಗಿ ವರದಿ ಪಡೆಯಬೇಕಿರುವುದಾಗಿ ತಿಳಿಸಿದರು.

**ತೀರ್ಮಾನ :**

1. **2023ನೇ ಜನವರಿ ಆವೃತ್ತಿಯಲ್ಲಿ ಬಿ.ಎಸ್ಸಿ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಳ ಮಾಡುವ ದೃಷ್ಠಿಯಿಂದ ವಿಜ್ಞಾನ ವಿಷಯಗಳನ್ನು ಒಳಗೊಂಡ, ವಿಜ್ಞಾನ ವಿಷಯಗಳ ವಾರಾಂತ್ಯ ಸಮಾಲೋಚನೆ ಸಂಪರ್ಕ ಕಾರ್ಯಕ್ರಮ, ಪ್ರಾಯೋಗಿಕ ತರಗತಿಗಳನ್ನು ನಡೆಸಲು ಅನುಕೂಲ ಇರುವ ಕಾಲೇಜುಗಳಲ್ಲಿ ಕರಾಮುವಿ ಯ ಬಿ.ಎಸ್ಸಿ ಕಲಿಕಾರ್ಥಿ ಸಹಾಯ ಕೇಂದ್ರಗಳಾಗ ಬಯಸುವ ಕಾಲೇಜುಗಳಿಗೆ ಶುಲ್ಕವನ್ನು ನಿಗಧಿಪಡಿಸುವ ಮತ್ತು ಜಾಹೀರಾತನ್ನು ನೀಡಲು ಅನುಮೋದನೆ ನೀಡಲಾಯಿತು.**
2. **ಕರಾಮುವಿ ಯ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸರ್ಕಾರಿ ಕಾಲೇಜುಗಳಲ್ಲಿ ತೆರೆಯುವ ಸಂಬಂಧ ಆಯುಕ್ತರು ಕಾಲೇಜು ಶಿಕ್ಷಣ ರವರಿಗೆ ಡೀನ್ (ಅಧ್ಯಯನ ಕೇಂದ್ರ) ವತಿಯಿಂದ ಪತ್ರವ್ಯವಹಾರ ನಡೆಸಲು ತೀರ್ಮಾನಿಸಲಾಯಿತು.**
3. **ನ್ಯಾಕ್ ವಿಭಾಗದಿಂದ ಸಿದ್ದಪಡಿಸಿ ನೀಡುವ Questionary ಮಾದರಿಯಲ್ಲಿ ಕರಾಮುವಿ ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರವೇಶಾತಿ ಪೂರ್ವ ಸಮಾಲೋಚನೆ ನಡೆಸುವುದು ಮತ್ತು ವರದಿಯನ್ನು ನಿಗಧಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಸಲ್ಲಿಸುವಂತೆ ತಿಳಿಸಿ ಡೀನ್ (ಅಧ್ಯಯನ ಕೇಂದ್ರ)ದ ವತಿಯಿಂದ ಸುತ್ತೋಲೆ ಹೊರಡಿಸುವುದು ಎಂದು ತೀರ್ಮಾನಿಸಲಾಯಿತು.**
4. **ಮೈಸೂರಿನ ಟಿ.ಟಿ.ಎಲ್ ಕಾಲೇಜಿನ ಕಲಿಕಾರ್ಥಿ ಕೇಂದ್ರದ ಸಿಬ್ಬಂದಿಗಳಿಗೆ ಗೌರವಧನ ನೀಡುತ್ತಿರುವಂತೆ ಸರ್ಕಾರಿ ಕಲಿಕಾರ್ಥಿ ಕೇಂದ್ರಗಳಿಗೆ ಗೌರವಧನ ನೀಡುವುದು ಎಂದು ತೀರ್ಮಾನಿಸಲಾಯಿತು.**
5. **2023ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಬಂಧ ಶುಲ್ಕವನ್ನು ಒಟ್ಟಾರೆಯಾಗಿ 10,000 + 50,000 = 60,000/- ಗಳನ್ನು ನಿಗಧಿಪಡಿಸಿ ತೀರ್ಮಾನಿಸಲಾಯಿತು.**

ಕುಲಸಚಿವರು　　　　　　　　　　　　ಕುಲಪತಿಗಳು

6. **ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು, ಯುವರಾಜ ಕಾಲೇಜುಗಳಲ್ಲಿ Extension Centre ತೆರೆಯುವ ಸಂಬಂಧವಾಗಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ ರವರಿಗೆ ಪತ್ರವ್ಯವಹಾರ ಮಾಡುವುದು ಹಾಗೂ ಒಪ್ಪಿದಲ್ಲಿ ಒಡಂಬಡಿಕೆ ಮಾಡಿಕೊಳ್ಳುವುದು ಮತ್ತು ಖಾಸಗಿ ಕಾಲೇಜುಗಳಾದ ಜೆ.ಎಸ್.ಎಸ್. ಮಹಿಳಾ ಕಾಲೇಜು, ಮಹಾಜನ ಕಾಲೇಜು ಮತ್ತು ಸೆಂಟ್ ಜೋಸೆಫ್ ಕಾಲೇಜಿನ ಪ್ರಾಂಶುಪಾಲರಿಗೂ Extension Centre ತೆರೆಯುವ ಸಂಬಂಧವಾಗಿ ಪತ್ರವ್ಯವಹಾರ ಮಾಡುವುದು ಹಾಗೂ ಒಪ್ಪಿದಲ್ಲಿ ಒಡಂಬಡಿಕೆ ಮಾಡಿಕೊಳ್ಳುವುದು ಎಂದು ತೀರ್ಮಾನಿಸಲಾಯಿತು.**

*********

**ವಿಷಯ ಸಂಖ್ಯೆ: 23.03**

**ವಿಷಯ:** MA(JMC) CBCS ಪರಿಷ್ಕೃತ ಪಠ್ಯಕ್ರಮ ಅನುಮೋದನೆ ಪಡೆಯುವ ಬಗ್ಗೆ.

******

ಕರಾಮುವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪದವಿ ಕಾರ್ಯಕ್ರಮವನ್ನು CBCS ಸೆಮಿಸ್ಟರ್ ಪದ್ಧತಿಯಲ್ಲಿ ಆರಂಭಿಸಲು ಈಗಾಗಲೇ ಅನುಮೋದನೆ ಪಡೆದಿದ್ದು, ಸದರಿ ಪರಿಷ್ಕೃತ ಪಠ್ಯಕ್ರಮವನ್ನು Department Council ಸಭೆಯಲ್ಲಿ ಮಂಡಿಸಿ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದ BOS ಸಭೆಯಲ್ಲಿ Circulation ಮೂಲಕ ದಿನಾಂಕ:27.12.2022ರಂದು ಮಂಡಿಸಿ ಅನುಮೋದನೆ ಪಡೆಯಲಾಗಿದೆ (BOS ಸಭೆಯ ನಡಾವಳಿಯ ಪ್ರತಿ ಲಗತ್ತಿಸಿದೆ). ಸದರಿ ಪಠ್ಯಕ್ರಮವನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ :** MA(JMC) CBCS **ಪರಿಷ್ಕೃತ ಪಠ್ಯಕ್ರಮಕ್ಕೆ ತಾತ್ವಿಕ ಅನುಮೋದನೆ ನೀಡಲಾಯಿತು. ಮುಂದುವರೆದು, ನ್ಯೂನತೆಗಳನ್ನು ಸರಿಪಡಿಸಿ ತುರ್ತಾಗಿ ಸಲ್ಲಿಸುವಂತೆ ಅಧ್ಯಯನ ವಿಭಾಗದ ಮುಖ್ಯಸ್ಥರಿಗೆ ಸೂಚಿಸಲು ಡೀನ್ (ಶೈಕ್ಷಣಿಕ) ರವರಿಗೆ ತಿಳಿಸಲಾಯಿತು.**

*********

**ವಿಷಯ ಸಂಖ್ಯೆ:23.04**

**ವಿಷಯ :** ಕರಾಮುವಿ ನಿಲಯದಲ್ಲಿ 2001–02 ರಿಂದ 2012–13 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ/ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡುವ ಬಗೆಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2001–02 ರಿಂದ 2012–13 ರವರೆಗೆ ವಿವಿಧ ಸ್ನಾತಕ/ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಕಾರಣಾಂತರಗಳಿಂದ ಪರೀಕ್ಷೆ ತೆಗೆದುಕೊಂಡಿಲ್ಲದ ಹಾಗೂ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ 2020–2021ನೇ ಹಾಗು 2021–2022 ನೇ ಸಾಲುಗಳಲ್ಲಿ ವಿದ್ಯಾರ್ಥಿಗಳ ಮನವಿ ಮೇರೆಗೆ ಶೈಕ್ಷಣಿಕ ಮಂಡಳಿ ಹಾಗೂ ವ್ಯವಸ್ಥಾಪನ ಮಂಡಳಿಯ ಅನುಮೋದನೆ ಪಡೆದು ಎರಡು ಬಾರಿ ಪರೀಕ್ಷೆಗಳನ್ನು ಬರೆಯಲು ಅವಕಾಶವನ್ನು ನೀಡಲಾಗಿರುತ್ತದೆ.

ಕುಲಸಚಿವರು ಕುಲಪತಿಗಳು

2001–02 ರಿಂದ 2012–13ನೇ ಸಾಲಿನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಮನವಿ ಪತ್ರಗಳನ್ನು ಸಲ್ಲಿಸಿ ಕೋವಿಡ್–19 ಸಾಂಕ್ರಾಮಿಕ ರೋಗ, ಲಾಕ್‌ಡೌನ್ ಮತ್ತು ಅತಿವೃಷ್ಠಿಯಿಂದಾದ ಪ್ರಕೃತಿ ವಿಕೋಪ ಹಾಗೂ ಇನ್ನಿತರ ಸಮಸ್ಯೆಗಳಿಂದ ಹಿಂದಿನ ಸಾಲುಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ 2022–23ನೇ ಸಾಲಿನಲ್ಲಿ ನಡೆಯುವ ಪರೀಕ್ಷೆಯ ಸಮಯದಲ್ಲಿ ಪೂರಕ ಪರೀಕ್ಷೆಯನ್ನು ಬರೆಯಲು ಮತ್ತೊಮ್ಮೆ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಈ ವಿದ್ಯಾರ್ಥಿಗಳಿಗೆ (2001–02 ರಿಂದ 2012–13) ಮೈಸೂರು ಪರೀಕ್ಷಾ ಕೇಂದ್ರದಲ್ಲಿಯೇ ಮಾತ್ರ ನಿಗದಿಪಡಿಸಿ ಪರೀಕ್ಷೆಗಳನ್ನು ನಡೆಸುವ ವಿಷಯವನ್ನು 60ನೇ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲಾಗಿತ್ತು.\

2013–14 ಮತ್ತು 2014–15ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ (ಪಿ.ಜಿ)ವಿದ್ಯಾರ್ಥಿಗಳಿಗೆ ನಾಲ್ಕು ವರ್ಷದ ಅವಧಿ ಪೂರ್ಣ ಗೊಂಡಿರುತ್ತದೆ ಹಾಗೂ ಸ್ನಾತಕ (ಯು.ಜಿ) ವಿದ್ಯಾರ್ಥಿಗಳಿಗೆ ಆರು ವರ್ಷಗಳ ಅವಧಿ ಪೂರ್ಣಗೊಂಡಿರುವುದಿಲ್ಲ. ಈ ವಿದ್ಯಾರ್ಥಿಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಪಠ್ಯಕ್ರಮವು ಇರುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಈ ಸಭೆಯಲ್ಲಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಲಾಗಿ ತೀರ್ಮಾನವನ್ನು ವರ್ಷವಾರು ವಿದ್ಯಾರ್ಥಿಗಳ ಅಂಕಿ–ಅಂಶಗಳನ್ನು ಪರಿಶೀಲಿಸಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯು 500ಕ್ಕೂ ಹೆಚ್ಚು ಇದ್ದಲ್ಲಿ ಈ ಸಾಲಿನ ವಿದ್ಯಾರ್ಥಿಗಳಿಗೆ ಅನುಮತಿ ನೀಡವ ಬಗ್ಗೆ ತೀರ್ಮಾನವಾಗಿರುತ್ತದೆ.

ಈ ಸಂಬಂಧ ಈಗಾಗಲೇ ಮನವಿ ಪತ್ರಗಳನ್ನು ನೀಡಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ವಿಷಯವಾರು ವಿವರಗಳನ್ನು ನೀಡಲಾಗಿದೆ (ಅಡಕದಲ್ಲಿ ಲಗತ್ತಿಸಿದೆ). ಮುಂದುವರೆದಂತೆ ಹಲವು ವಿದ್ಯಾರ್ಥಿಗಳು ದೂರವಾಣಿ ಮೂಲಕ ಮಾಹಿತಿಯನ್ನು ಕೋರಿರುತ್ತಾರೆ ಹಾಗೂ ಪರೀಕ್ಷಾ ಅಧಿಸೂಚನೆ ಹೊರಡಿಸಿದ ನಂತರ ಅಂಕಿ–ಅಂಶಗಳು ದೊರೆಯುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರುತ್ತಾ ಮುಂದಿನ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಲು ತಿಳಿಸಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :** 2001–02 ರಿಂದ 2012–13 ರವರೆಗೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದು ಪರೀಕ್ಷೆ ತೆಗೆದುಕೊಂಡಿಲ್ಲದ/ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅಂತಿಮವಾಗಿ ಪರೀಕ್ಷೆ ಬರೆಯಲು ಅವಕಾಶ ನೀಡಿ ಅನುಮೋದಿಸಲಾಯಿತು.

*********

**<u>ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು</u>**

**ವಿಷಯ ಸಂಖ್ಯೆ: 23.05**

**ವಿಷಯ:** ವಿಶ್ವವಿದ್ಯಾನಿಲಯದ ವಿವಿಧ ಪ್ರಾದೇಶಿಕ ಕೇಂದ್ರಗಳಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಅನುಷ್ಠಾನಗೊಳಿಸುವ ಕುರಿತು.,

**ಉಲ್ಲೇಖ:** ಪರೀಕ್ಷಾ ವಿಭಾಗದ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಪವಿ/ಸಿಬ್ಬಂದಿ–1/ಪ್ರಾ.ಡಿ.ಮೌ/23/2022–23, ದಿನಾಂಕ:22–12–2022

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2021–22ನೇ ಶೈಕ್ಷಣಿಕ ಸಾಲಿನಿಂದ ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ಪ್ರಾರಂಭಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಪರೀಕ್ಷಾ ಸಂಬಂಧಿ ಫಲಿತಾಂಶಗಳ ಸೇವೆಗಳನ್ನು ವ್ಯವಸ್ಥಿತವಾಗಿ, ಶೀಘ್ರವಾಗಿ ಮತ್ತು ಉತ್ತಮ ರೀತಿಯಲ್ಲಿ ಒದಗಿಸುವ ಸಂಬಂಧ, ಡಿಜಿಟಲ್ ಮೌಲ್ಯಮಾಪನ ಕಾರ್ಯಗಳನ್ನು ಪ್ರಾದೇಶಿಕ ಕೇಂದ್ರಗಳ ಹಂತದಲ್ಲಿ ವಿಕೇಂದ್ರೀಕರಣಗೊಳಿಸಲು ಉಲ್ಲೇಖಿತ

ಕುಲಸಚಿವರು ಕುಲಪತಿಗಳು

ಕಚೇರಿ ಆದೇಶದಲ್ಲಿ **"ಡಿಜಿಟಲ್ ಮೌಲ್ಯಮಾಪನ ಕಾರ್ಯವಿಧಾನ ಪರಿಶೀಲನಾ ಸಮಿತಿ"ಯನ್ನು** ರಚಿಸಲಾಗಿರುತ್ತದೆ. ಸದರಿ ಸಮಿತಿಯು ಪ್ರಸ್ತುತ ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಡಿಜಿಟಲ್ ಮೌಲ್ಯಮಾಪನಗಳ ಉತ್ತಮ ಕಾರ್ಯವಿಧಾನಗಳ ಬಗ್ಗೆ ತಿಳಿದುಕೊಂಡು ಅಗತ್ಯ ಮಾಹಿತಿಗಳನ್ನು ಕ್ರೂಢೀಕರಿಸಲು ರಾಜ್ಯದ ಇತರೆ ವಿಶ್ವವಿದ್ಯಾನಿಲಯಗಳ ಪ್ರಾದೇಶಿಕ ಕೇಂದ್ರಗಳಾದ **ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಮೈಸೂರು ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರ, ಮೈಸೂರು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ, ಮೈಸೂರು ಪ್ರಾದೇಶಿಕ ಕೇಂದ್ರ, ಮೈಸೂರು** ಇಲ್ಲಿಗೆ ಭೇಟಿ ನೀಡಿ, ವಿಚಾರಿಸಿ ಪರಿಶೀಲಿಸಿ ಅದೇ ಮಾದರಿಯನ್ನು ನಮ್ಮ ವಿಶ್ವವಿದ್ಯಾನಿಲಯದಲ್ಲಿಯೂ ಅಳವಡಿಸಿಕೊಂಡು ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಎರಡು ವರದಿಗಳನ್ನು ಸಿದ್ಧಪಡಿಸಿ ನೀಡಿರುತ್ತದೆ (ಅನುಬಂಧ A ಮತ್ತು B).

**ಡಿಜಿಟಲ್ ಮೌಲ್ಯಮಾಪನ ಕಾರ್ಯವಿಧಾನ ಪರಿಶೀಲನಾ ಸಮಿತಿ**ಯು ಸಲ್ಲಿಸಿರುವ ವರದಿಯ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಾನದಿಂದಲೇ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸಬೇಕೆ? ಅಥವಾ ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ವಿಕೇಂದ್ರೀಕರಿಸಿ ನಿರ್ವಹಿಸಬೇಕೆ ಎಂಬುದರ ಬಗ್ಗೆ ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಡಿಜಿಟಲ್ ಮೌಲ್ಯಮಾಪನ ಕಾರ್ಯವೈಖರಿಯನ್ನು ಗಮನದಲ್ಲಿಟ್ಟುಕೊಂಡು ಅದರ ಸಾಧಕ ಬಾಧಕಗಳನ್ನು ಚರ್ಚಿಸಿ ನಿರ್ಣಯ ಕೈಗೊಂಡು ವ್ಯವಸ್ಥಾಪನ ಮಂಡಳಿಗೆ ಶಿಫಾರಸ್ಸು ಮಾಡುವ ಸಂಬಂಧದಲ್ಲಿ ವಿಷಯ ಸಿದ್ಧಪಡಿಸಿ ಮಂಡಿಸಿದೆ.

**<u>ಚರ್ಚೆ:</u>**

ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಕೇಂದ್ರ ಕಛೇರಿ ಒಂದರಲ್ಲಿ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುತ್ತಿರುವುದರಿಂದ ಆಗುತ್ತಿರುವ ತೊಂದರೆ ಹಾಗೂ ಫಲಿತಾಂಶ ಪ್ರಕಟಣೆಯಲ್ಲಿ ಆಗುವ ವಿಳಂಬದ ಬಗ್ಗೆ ವಿವರಿಸಿ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಪ್ರಾದೇಶಿಕ ಕೇಂದ್ರಗಳಲ್ಲಿಯೇ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ಬಗ್ಗೆ ಸಭೆಯ ಸದಸ್ಯರ ಸೂಕ್ತ ಸಲಹೆ ತೀರ್ಮಾನಗಳನ್ನು ತಿಳಿಸುತ್ತಾ ಈ ಸಂಬಂಧ ಅವಶ್ಯವಿರುವ ಉಪಕರಣಗಳ ಮಾಹಿತಿಯನ್ನು ನೀಡಿದರು.

ಡಾ. ಮಹೇಶ ವಿ, ರವರು ಮಾತನಾಡಿ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ರಾಣಿಚನ್ನಮ್ಮ ವಿಶ್ವವಿದ್ಯಾನಿಲಯದಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದೆ ನಿಲ್ಲಿಸಿರುವ ಅಂಶವನ್ನು ಗಮನದಲ್ಲಟ್ಟುಕೊಳ್ಳಬೇಕಾಗುತ್ತದೆ ಮತ್ತು ಮುಂದಿನಗಳಲ್ಲಿ ಎನ್.ಇ.ಪಿ. ಅಳವಡಿಸಿಕೊಳ್ಳಬೇಕಿರುವ ಹಿನ್ನೆಲೆಯಲ್ಲಿ ಒಮ್ಮೆಲ್ಲೆ ಪ್ರಾದೇಶಿಕ ಕೇಂದ್ರಗಳಲ್ಲಿ ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕಾಗಿ ನಿರ್ಧಾರ ಕೈಗೊಳ್ಳುವುದು ಸೂಕ್ತವಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ. ರಾಜೇಶ್ವರಿ ರವರು ಮಾತನಾಡಿ ಡಿಜಿಟಲ್ ಮೌಲ್ಯಮಾಪನ ಕಾರ್ಯಕ್ಕಾಗಿ ವಿಷಯದೊಂದಿಗೆ ತಿಳಿಸಿರುವಂತೆ ಅಷ್ಟು ಪ್ರಮಾಣದ ಉಪಕರಣಗಳನ್ನು ಅಳವಡಿಸಿಕೊಂಡಲ್ಲಿ ವಿವಿ ನಿಲಯಕ್ಕೆ ಆರ್ಥಿಕ ಹೊರೆಯಾಗುವುದಾಗಿ ಹಾಗೂ ಪ್ರಾದೇಶಿಕ ಕೇಂದ್ರಗಳಲ್ಲಿ ಮೌಲ್ಯಮಾಪನ ಕಾರ್ಯವನ್ನು ಮಾಡಿಸುವ ಬದಲಿಗೆ ಕೇಂದ್ರ ಕಛೇರಿಯ ನಿಯಂತ್ರಣದಲ್ಲಿಯೇ ಮೌಲ್ಯಮಾಪನ ಮಾಡಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಸುಧೀರ್ಘವಾಗಿ ಚರ್ಚೆಯಾದ ನಂತರದಲ್ಲಿ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಸಂಗ್ರಹಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

**ತೀರ್ಮಾನ : ಪ್ರಸ್ತುತ ಅಳವಡಿಸಿಕೊಂಡಿರುವ ಸಾಫ್ಟ್‌ವೇರ್‌ಅನ್ನೆ ಉಪಯೋಗಿಸಿಕೊಳ್ಳುವುದು, ಅವಶ್ಯವಿದ್ದಲ್ಲಿ ಸಾಫ್ಟ್‌ವೇರ್‌ನಲ್ಲಿ ತಿದ್ದುಪಡಿಮಾಡಿಸಿಕೊಂಡು 3 ಪ್ರಾದೇಶಿಕ ಕೇಂದ್ರಗಳಲ್ಲಿ ಮೌಲ್ಯಮಾಪನ ಕಾರ್ಯವನ್ನು ಮಾಡಿಸುವ ಬಗ್ಗೆ ತೀರ್ಮಾನಿಸಲಾಯಿತು. ವಿವಿ ನಿಲಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಸ್ಕ್ಯಾನರ್ ಸೇರಿದಂತೆ ಅವಶ್ಯ ಹಾರ್ಡ್‌ವೇರ್‌ಗಳನ್ನು ಖರೀದಿಸಿ ಅಳವಡಿಸಿಕೊಂಡು ಮೌಲ್ಯಮಾಪನ ಕಾರ್ಯವನ್ನು ನಡೆಸಲು ಅನುಮೋದಿಸಲಾಯಿತು.**

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 23.06**

ವಿಷಯ: ಸರ್ಕಾರದಿಂದ ಸಿದ್ಧಪಡಿಸಿ ನೀಡಿರುವ ಪರಿನಿಯಮದ ಬಗೆಗೆ.

*****

ಸರ್ಕಾರದಿಂದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ As per the UGC Regulations 2018 ಪ್ರಕಾರ "The Stautes Relating to Appointment and Prmotion of Teachers and other academic staff and measures for the maintenance of standards in higher education in the Karnataka State Open University, As per the UGC Regulations 2018. (Framed under Section 23(2) read with Section 22(d) of Karnataka State Open University Act,1992)" ಕರಡು ಪರಿನಿಯಮವನ್ನು ಸಿದ್ಧಪಡಿಸಿ ರವಾನಿಸಿರುತ್ತಾರೆ. ಸದರಿ ಪರಿನಿಯಮವನ್ನು ಪರಿಶೀಲಿಸಲಾಗಿ ಕರಾಮುವಿ ನಿಲಯಕ್ಕೆ ಅನ್ವಯವಾಗುವಂತೆ ಕೆಲ ಅಂಶಗಳನ್ನು ತಿದ್ದುಪಡಿ ಮಾಡಲಾಗಿದ್ದು ಸದರಿ ಪರಿನಿಯಮವನ್ನು ಮುಂದಿನ ಕ್ರಮಕ್ಕಾಗಿ ರವಾನಿಸುವ ಬಗ್ಗೆ ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ : ಅನುಮೋದಿಸಲಾಯಿತು.**

**********

ಅಂತಿಮವಾಗಿ 23ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಹಾಗೂ ಅಧ್ಯಕ್ಷರಿಗೆ ಮಾನ್ಯ ಕುಲಸಚಿವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು